ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
**Telephone No:** 0821-2343939
**Fax No :** 0821-2343939

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore.org
E-mail ID:gmcomm@cescmysore.org
E-mail ID:seccesc@gmail.com

Company Identity Number[CIN]:- U40109KA2004SGC03

ಕ್ರಮಾಂಕ: ಪ್ರ.ವ್ಯ.(ವಾಣಿಜ್ಯ)/ಉ.ಪ್ರ.ವ್ಯ(ವಾಣಿಜ್ಯ)/ಸ.ಪ್ರ.ವ್ಯ(ವಾಣಿಜ್ಯ)/ಆ-2/21-22 / cys-1992 ದಿನಾಂಕ: 15 MAR 2022
ಲಗತ್ತು:

## ದಿನಾಂಕ: 15.03.2022 ರಂದು ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು.

**ಸಭೆಯಲ್ಲಿದ್ದ ಅಧಿಕಾರಿಗಳ ಮಾಹಿತಿಯನ್ನು ಲಗತ್ತಿಸಲಾಗಿದೆ.**

ಮಾನ್ಯ ನಿರ್ದೇಶಕರು (ತಾಂತ್ರಿಕ) ರವರು ಎನರ್ಜಿ ಆಡಿಟನ ಬಗ್ಗೆ ಸಭೆಯನ್ನು ಕರೆದಿರುವುದಾಗಿ ತಿಳಿಸುತ್ತಾ, ಉಪವಿಭಾಗವಾರು, ವಿಭಾಗವಾರು ಹಾಗೂ ಫೀಡರವಾರು T&D loss ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿದರು. ನಿಗಮದ T&D loss ನ್ನು ನಿಖರವಾಗಿ ಕಂಡುಹಿಡಿಯಲು ಈ ಕೆಳಗಿನ ಮಾಹಿತಿಯನ್ನು ಪಡೆದುಕೊಳ್ಳುವಂತೆ ಸೂಚಿಸಿರುತ್ತಾರೆ.

2020-21 ನೇ ಸಾಲಿನ ನಿಗಮದ T&D loss 12.75% ಇರುವುದನ್ನು ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಗಂಭೀರವಾಗಿ ಪರಿಗಣಿಸಿದ್ದು, Tariff Filing ನಲ್ಲಿ FY-22 ಗೆ ವಿತರಣಾ ನಷ್ಟವನ್ನು 11.50% ಎಂದು ಸಲ್ಲಿಸಲಾಗಿದ್ದು, Advisory Committee ಸಭೆಯಲ್ಲಿ FY-22 ರ ವಿದ್ಯುತ್ ವಿತರಣಾ ನಷ್ಟ ಜನವರಿ-2022 ರ ಅಂತ್ಯಕ್ಕೆ 12.29% ಎಂದು ನಮೂದಿಸಲ್ಪಟ್ಟಿರುವುದನ್ನು ಮರುಪರಿಶೀಲಿಸಲು ತಿಳಿಸಿರುವ ಪ್ರಯುಕ್ತ ಸಭೆಯನ್ನು ಕರೆಯಲಾಗಿದ್ದು, ನಿಖರವಾದ ಎನರ್ಜಿ ಆಡಿಟ್ ತಯಾರಿಸಿ ಕ್ರಮ ಕೈಗೊಳ್ಳುವಂತೆ ಉಪ ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ) ರವರಿಗೆ ಸೂಚಿಸಲಾಯಿತು ಹಾಗೂ ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವಂತೆ ಸೂಚಿಸಲಾಯಿತು.

1. 2021-22 ನೇ ಸಾಲಿನ ಮಾಸಿಕವಾರು 66 ಕೆವಿ ವೋಲ್ಟೇಜ್ ವರ್ಗದಲ್ಲಿ IPP ಸ್ಥಾವರಗಳು Import ಮಾಡಿರುವ ಎನರ್ಜಿಯ ವಿವರವನ್ನು ಪಡೆಯುವುದು.
2. 2021-22 ನೇ ಸಾಲಿನ Wheeling energy, Open Access ಎನರ್ಜಿಯನ್ನು ವಿಭಾಗವಾರು, ಮಾಸಿಕವಾರು ಮಾಹಿತಿಯನ್ನು ಪಡೆಯುವುದು.
3. ವಿಭಾಗವಾರು SRTPV ಸ್ಥಾವರಗಳ ಮಾಹಿತಿಯನ್ನು ಪಡೆದು, ನಿಗಮದಲ್ಲಿ ಲಭ್ಯವಿರುವ ಮಾಹಿತಿಯೊಂದಿಗೆ ಪರಿಶೀಲಿಸಿ ಸಲ್ಲಿಸುವುದು.
4. ಉಪವಿಭಾಗವಾರು, ವಿಭಾಗವಾರು ವಿತರಣಾ ನಷ್ಟದ ಮಾಹಿತಿಯನ್ನು ಸಂಬಂಧಪಟ್ಟ ವಿಭಾಗಗಳಿಂದ ಪಡೆಯಲು ಸೂಚಿಸಿದರು.
5. 2020-21 ಹಾಗೂ 2021-22 ನೇ ಸಾಲಿನ ಮಾಹೆವಾರು, ಫೀಡರವಾರು ಮತ್ತು ವಿಭಾಗವಾರು ಎನರ್ಜಿ ಆಡಿಟನ ಮಾಹಿತಿಯನ್ನು ಪಡೆಯುವಂತೆ ಸೂಚಿಸಿದರು.
6. ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನೀರಾವರಿ ಪಂಪುಸೆಟ್ಟಿನ ಬಳಕೆಯನ್ನು ಕಂಡುಹಿಡಿಯಲು ನೀಡಿರುವ ನಮೂನೆಯನ್ನು ಕೂಲಂಕುಶವಾಗಿ ಪರಿಶೀಲಿಸುತ್ತಾ ಮಾನ್ಯ ನಿರ್ದೇಶಕರು (ತಾಂತ್ರಿಕ) ರವರು IP ಫೀಡರಗಳಲ್ಲದೆ ಉಳಿದ ಫೀಡರಗಳ ಮೇಲಿರುವ ಅನಧಿಕೃತ ಪಂಪುಸೆಟ್ಟಿನ ಮಾಹಿತಿಯನ್ನು ಪಡೆಯುವಂತೆ ಸೂಚಿಸಿದರು ಹಾಗೂ 21.03.2022 ರೊಳಗೆ ಮಾಹಿತಿಯನ್ನು ಪಡೆದು 2022 ರ ಜನವರಿ ತಿಂಗಳವರೆಗಿನ ಎನರ್ಜಿ ಆಡಿಟ್ ತಯಾರಿಸಿ ಸಲ್ಲಿಸುವುದು.



Scanned by CamScanner

7. ಬೀದಿ ದೀಪಗಳಲ್ಲೂ ಎನರ್ಜಿ ಸೋರಿ ಹೋಗುತ್ತಿರುವುದರಿಂದ ಅನಧಿಕೃತ/ಮಾಪಕರಹಿತ ಬೀದಿ ದೀಪದ ಬಿಂದುಗಳ ಮಾಹಿತಿಯನ್ನು ಪಡೆಯುವಂತೆ ಸೂಚಿಸಿದರು ಹಾಗೂ 21.03.2022 ರೊಳಗೆ ಮಾಹಿತಿಯನ್ನು ಪಡೆದು 2022 ರ ಜನವರಿ ತಿಂಗಳವರೆಗಿನ ಎನರ್ಜಿ ಆಡಿಟ್ ತಯಾರಿಸಿ ಸಲ್ಲಿಸುವುದು.

ಸಭೆಯನ್ನು ಮಧ್ಯಾಹ್ನ 2.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

15/3

ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ).
I/C ಚಾ.ವಿ.ಸ.ನಿ.ನಿ. ಮೈಸೂರು.

1. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಆಂತರಿಕ ಪರಿಶೋಧನೆ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು
4. ಅಧೀಕ್ಷಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರ/ಚಾಮರಾಜನಗರ-ಕೊಡಗು/ಮಂಡ್ಯ/ಹಾಸನ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಪ್ರಧಾನ ವ್ಯವಸ್ಥಾಪಕರು, ವಾಣಿಜ್ಯ/ತಾಂತ್ರಿಕ/ಯೋಜನೆ/ಖರೀದಿ/ಆ ಮತ್ತು ಮಾ.ಸಂ/A&R/B&R, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ಲೆಕ್ಕಾ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು / ಹಾಸನ
7. ಎಲ್ಲಾ ಕಾರ್ಯನಿರ್ವಾಹಕ ಇನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ
8. ಉಪ ಪ್ರಧಾನ ವ್ಯವಸ್ಥಾಪಕರು, A&R/ಡಿಎಸ್ಎಂ/ಎಂಐಎಸ್/ಇಬಿಸಿ/ವಾಣಿಜ್ಯ/ RA-1 /RA-2 ನಿಗಮ ಕಛೇರಿ, ಚಾವಿಸನಿನಿ, ಮೈಸೂರು
9. ಉಪ ಪ್ರಧಾನ ವ್ಯವಸ್ಥಾಪಕರು, ಎಂಐಎಸ್, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರು ನಿಗಮದ ಜಾಲತಾಣಗಳಲ್ಲಿ ಪ್ರಕಟಿಸಲು.
10. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಂಟಿ ವಿಭಾಗ ಚಾವಿಸನಿನಿ, ಮೈಸೂರು / ಹಾಸನ
11. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜಾಗೃತದಳ ವಿಭಾಗ, ಚಾವಿಸನಿನಿ, ಮೈಸೂರು
12. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಟಿಎಕ್ಯೂಸಿ-1 ಮತ್ತು 2 ನಿಗಮ ಕಛೇರಿ, ಚಾವಿಸನಿನಿ, ಮೈಸ್ರರ
13. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
14. ಉಪ ಲೆಕ್ಕಾ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು / ಚಾಮರಾಜನಗರ-ಕೊಡಗು / ಮಂಡ್ಯ / ಹಾಸನ, ಚಾವಿಸನಿನಿ.
15. ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
16. ಎಲ್ಲಾ ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ಚಾವಿಸನಿನಿ.
17. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು ಇದನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
18. ತಾಂತ್ರಿಕ ಸಹಾಯಕರು, ಚಾವಿಸನಿನಿ ಇವರಿಗೆ ರವಾನಿಸುತ್ತಾ ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಅವಗಾಹನೆಗೆ ತರಲು ಕೋರಲಾಗಿರುತ್ತದೆ.
19. ಉ.ಪ್ರ.ವ್ಯ.(ವಾಣಿಜ್ಯ)/ಸ.ಪ್ರ.ವ್ಯ.(ವಾಣಿಜ್ಯ).
ಮು ಕ/ಕ ಪ್ರ



Scanned by CamScanner